


## ಕೆ.ಟಿ. ಗಟ್ಟಿ (1938)

ಓದುಗರ ಮನಸೆಳೆಯುವಂತೆ ಬರೆದ ಲೇಖಕ ಕೆ.ಟಿ. ಗಟ್ಟಿ. ಅವರು ಕತೆಗಾರ, ಕಾದಂಬರಿಕಾರ, ಕವಿ, ನಾಟಕಕಾರ, ಭಾಷಾತಜ್ಞ, ಶಿಕ್ಷಕ ಹೀಗೆ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದವರು. ಅವರನ್ನು ಮುಖ್ಯವಾಗಿ ಗುರುತಿಸುವುದು ಕಾದಂಬರಿಕಾರರೆಂದೇ. ಗಟ್ಟಿಯವರ ಹುಟ್ಟೂರು ಕಾಸರಗೋಡು ಸಮೀಪದ ಕೂಡ್ಲೂ. ಶಿಕ್ಷಣ ಪಡೆದಿದ್ದು ಕಾಸರಗೋಡಿನಲ್ಲಿ. ಅಲ್ಲೇ ಪ್ರೌಢಶಾಲಾ ಶಿಕ್ಷಕರಾಗಿ ಕೆಲಸ ಮಾಡಿದ ಗಟ್ಟಿ ಕೇರಳ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸ್ನಾತಕೋತ್ತರ ಪದವಿ ಪಡೆದು, ಮಣಿಪಾಲದ ಎಂ.ಐ.ಟಿ. ಸಂಸ್ಥೆಯಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಕಾಲ ಕೆಲಸ ಮಾಡಿದರು. ಬಳಿಕ ಅವರು ಇಥಿಯೋಪಿಯಾದಲ್ಲಿ ಭಾರತ ಸರ್ಕಾರದ ಪ್ರಾಧ್ಯಾಪಕರೆಂದು ನಿಯೋಜನೆಗೊಂಡು ಕೆಲಸ ಮಾಡಿದರು. ಅವರ ಸುಮಾರು 46 ಕಾದಂಬರಿಗಳು ಪ್ರಕಟವಾಗಿದ್ದು, ಅವುಗಳಲ್ಲಿ ಬಹುಪಾಲು ಪತ್ರಿಕೆಗಳಲ್ಲಿ ಧಾರಾವಾಹಿಗಳಾಗಿವೆ. ಇದರಿಂದಲೇ ಗಟ್ಟಿ ಅವರ ಬರಹದ ಶಕ್ತಿಯನ್ನು ಅರ್ಥ ಮಾಡಿಕೊಳ್ಳಬಹುದು. 'ಅಬ್ರಾಹ್ಮಣ', 'ಅಮುಕ್ತ', 'ಶಬ್ದಗಳು', 'ಸಾಫಲ್ಯ', 'ಪೂಜಾರಿ', 'ಕಾಮಯಜ್ಞ', 'ಅವಿಭಕ್ತರು', 'ನಿರಂತರ', 'ಅರಗಿನ ಅರಮನೆ', 'ಭೂಮಿಗೀತ' ಹೀಗೆ ಓದುಗರ ಗಮನಸೆಳೆದ ಅವರ ಕಾದಂಬರಿಗಳು ಹಲವಾರು. ಇಥಿಯೋಪಿಯಾದಿಂದ ಮರಳಿದ ಬಳಿಕ ಗಟ್ಟಿ ಅವರು ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯ ಬಳಿ ಕೃಷಿಕರಾಗಿ ನೆಲೆನಿಂತು, ಬರವಣಿಗೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಮನಸ್ಸಿನೊಳಗೆ ಬೊಬ್ಬೆಹಾಕಿದ. ಕಣ್ಣುಬಿಟ್ಟ ಮೇಲೆ ಪಾಂಡುರಂಗರಾಯನನ್ನು ಆಮೂಲಾಗ್ರ ಇದ್ದಕ್ಕಿದ್ದಂತೆ ಸಜೀವವಾಗಿ ಶ್ರೀಕೃಷ್ಣನೆದುರೇ ನುಂಗಿಹಾಕುವಂತೆ ನೋಡಿದ.

ಹತ್ತಾರು ಟೆಸ್ಟುಗಳು, ಇಂಟರ್‌ವ್ಯೂಗಳು ಫಲಕೊಡದಾಗ, ಬಿ.ಎ.ಯಲ್ಲಿ ಫಸ್ಟ್‌ಕ್ಲಾಸಿನಲ್ಲಿ ಪಾಸಾದ ಮಗ ವೆಂಕಟರಮಣನ ಮೇಲೆ ಬಹಳ ಆಸೆ ಆಕಾಂಕ್ಷೆಗಳನ್ನಿರಿಸಿಕೊಂಡಿದ್ದ ತಂದೆ ದಾಸಪ್ಪ ತಾನು ವಿದ್ಯಾ ಇಲಾಖೆಯಲ್ಲಿ 'ಪೀಯೋನು' ಆಗಿ ಮೂವತ್ತೈದು ವರ್ಷ ಕಾಲ ದುಡಿದು ನಿವೃತ್ತನಾದಾಗ ಸಿಕ್ಕಿದ ಗ್ರಾಚುಯಿಟಿ, ಪ್ರಾವಿಡೆಂಟ್ ಫಂಡ್, ಸಾಯದೆ ಉಳಿದುದರಿಂದ ತನ್ನ ಕೈಗೇ ಸಿಕ್ಕಿದ ಇನ್ಸೂರೆನ್ಸಿನ ಹಣ ಎಲ್ಲಾ ಕರಗುತ್ತಾ ಬರುತ್ತಿರುವಾಗ, ವೆಂಕಟರಮಣನ ಬೆನ್ನಲ್ಲಿ ಹುಟ್ಟಿದ ಇಬ್ಬರು ಹುಡುಗಿಯರಿಗೆ ಭರತದ ನೀರಿನಂತೆ ಯೌವನವು ಏರಿಬರುತ್ತಿರುವುದನ್ನು ಕಂಡು, ದಿನದಿಂದ ದಿನಕ್ಕೆ ಇಳಿದುಹೋಗಿ ಕೆಮ್ಮುತ್ತಾ ಕೆಮ್ಮುತ್ತಾ ದಿನಗಳನ್ನು ತಳ್ಳುತ್ತಿರುವುದನ್ನು ಕಂಡ ವೆಂಕಟರಮಣ ತಾನೂ ಕಣ್ಣೀರು ಸುರಿಸುತ್ತಾ 'ಶ್ರೀಕೃಷ್ಣಪರಮಾತ್ಮಾ, ನಿನ್ನ ನಂಬಿದವರನ್ನು